

# ಲೇಡಿ ಮಸ್‌ಗ್ರೇವ್
# ಇಲ್ಲಿ ಹವಳವೇ ನಿತ್ಯ-ಸತ್ಯ!

**ದಕ್ಷಿಣ ಗ್ರೇಟ್ ಬ್ಯಾರಿಯರ್ ರೀಫ್‌ನ 'ಹವಳ ಸುಂದರಿ' ಎಂದೇ ಖ್ಯಾತವಾಗಿರುವ 'ಲೇಡಿ ಮಸ್‌ಗ್ರೇವ್' ದ್ವೀಪ ತನ್ನೊಳಗೆ ಅಚ್ಚರಿಗಳನ್ನು ಬಚ್ಚಿಟ್ಟುಕೊಂಡಿರುವ ಕಡಲ ಖನಿ. ಅದ್ಭುತ ಜೀವಜಾಲ, ಹವಳದ ಚೆಲುವಿನ ಅವರ್ಣನೀಯ ಲೋಕ ಪರಿಚಯಿಸುವ ತಾಣ.**

**■ ವಿನತೆ ಶರ್ಮ**

ಶುಭ್ರ ಆಕಾಶದಲ್ಲಿ ಆಗ ತಾನೇ ಬಿಡಿಸಿದ್ದ ಬಿಳಿ ಹತ್ತಿಯಂತೆ ಹರಡಿದ್ದ ತೆಳು ಮೋಡಗಳು. ಚಿರವಿರಹಿಯು ತನ್ನ ಪ್ರೇಮವನ್ನು ಸಾದರಪಡಿಸಲೋ ಎಂಬಂತೆ ನೀಲ ದಿಗಂತಕ್ಕೆ ಮುತ್ತಿಡುವಂತೆ ಕಣ್ಣು ಹಾಯಿಸಿದಷ್ಟು ದೂರಕ್ಕೂ ಹರಡಿದ್ದ ಪಚ್ಚೆನೀಲ ಸಾಗರ. ಸಾಗರದಲೆಗಳಲ್ಲಿ ಬಳುಕುತ್ತಾ ತೇಲುತ್ತಿದ್ದ ನೂರಾರು ಜೆಲ್ಲಿ ಮೀನುಗಳನ್ನು ಓಡಿಸುತ್ತಾ ನಮ್ಮ ಪ್ರವಾಸಿ ದೋಣಿ ದೂರ, ಬಹುದೂರ ಸಾಗಿತ್ತು.

'ಆಸ್ಟ್ರೇಲಿಯಾದ ಸಕ್ಕರೆ ಬಟ್ಟಲು' ಎಂದು ಹೆಸರಾದ ಬಂಡಬರ್ಗ್ **(Bundaberg)** ಪಟ್ಟಣದ ಪರಿಧಿಯಲ್ಲಿದ್ದ ರೇವು ತಾಣದಿಂದ ಹೊರಟಿದ್ದ ನಾವು ಪ್ರವಾಸಿ ದೋಣಿಯಲ್ಲಿ ಪಯಣಿಸುತ್ತಾ ಎರಡು ಗಂಟೆಗಳ ಕಾಲ ಅನಂತ ನೀಲಸಾಗರವನ್ನು ನೋಡುತ್ತಾ ಅಲೆಗಳಲ್ಲಿ ಲೀನವಾಗುವ ಅಪೂರ್ವ ಅನುಭವ ಪಡೆದೆವು. ಪಯಣದ ಕೊನೆ ಅರ್ಧ ಗಂಟೆಗೆ ಮೊದಲು ಚಿಕ್ಕದೊಂದು ಸ್ಫಟಿಕ ಮಣಿಯಂತೆ ಕಾಣಿಸಿಕೊಂಡು ಕ್ರಮೇಣ ದೊಡ್ಡದಾಗುತ್ತಾ ತನ್ನ ಹಸಿರು ಭೂರಮೆ

